ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 335/2022**

**ಫ್ರಾಸಾ- 11 ಚಾಸಾ-14**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ದೇವರಾಜು ಕೆ. |
| ತಂದೆಯ ಹೆಸರುಃ | : | ಕರಿಯಪ್ಪ |
| ವಯಸ್ಸುಃ | : | 62ವರ್ಷ |
| ಉದ್ಯೋಗಃ | : | ನಿವೃತ್ತ ಪಿಎಸ್ಐ |
| ವಾಸ | : | ಬೇಲೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 25-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು ದಿಃ 01.01.2022 ರಿಂದ 01.01.2023ರವರೆಗೆ ಹಳೇಬೀಡು ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 29.08.2022ರಂದು ಈ ಪ್ರಕರಣದ ಕಡತವನ್ನು ಚಾಸಾ-13ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದೆನು. ಅದೇ ದಿವಸ ಮಾದಿಹಳ್ಳಿ ಗ್ರಾಮಕ್ಕೆ ಭೇಟಿ ಕೊಟ್ಟು ದೂರುದಾರರ ಮನೆಯ ಮುಂದೆ ಪಂಚರನ್ನು ಬರಮಾಡಿಕೊಂಡೆನು ಹಾಗೂ ರಾಸಾಯನಿಕ ತಜ್ಞರಾದ ವೀರಾಂಜನೆಯ ರವರನ್ನು ಸ್ಥಳಕ್ಕೆ ಕರೆಸಿಕೊಂಡು ಸ್ಥಳದಲ್ಲಿ ಚಾಸಾ-1ರವರು ಹಾಜರಿದ್ದು, ಸ್ಥಳವನ್ನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಈಗಾಗಲೇ ಗುರುತಿಸಲಾಗಿರುವ ನಿಪಿ.2ರಂತೆ ಪಂಚನಾಮೆಯನ್ನು ನಡೆಸಿದೆನು. ಅದರಲ್ಲಿ ನನ್ನ ರುಜು ನಿಪಿ.2(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತಜ್ಞರು ಸಂಗ್ರಹಿಸಿಕೊಟ್ಟ 8 ವಸ್ತುಗಳನ್ನು ಸ್ವೀಕರಿಸಿಕೊಂಡೆನು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-2 ಆಗಿರುತ್ತದೆ. ಅದೇ ಸಮಯದಲ್ಲಿ ಕೃತ್ಯ ನಡೆದ ನಕಾಶೆಯನ್ನು ನಿಪಿ.16ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ.16ಎ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಎರಡು ಪೋಟೋಗಳನ್ನು

ತೆಗೆಸಿರುತ್ತೇನೆ. ಅವುಗಳನ್ನು ನೋಡುತ್ತಿದ್ದು ನಿಪಿ.17 ಮತ್ತು 18 ಎಂದು ಗುರುತಿಸಲಾಯಿತು. ಆ 8 ವಸ್ತುಗಳನ್ನು ಪ್ಲಾಸ್ಟಿಕ್ ಕಬ್ಬಿಯಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲು ಮಾಡಿ ಪಂಚರ ಸಹಿಗಳನ್ನು ಹಾಕಿಸಿರುತ್ತೇನೆ. ನಂತರ ಠಾಣೆಗೆ ವಾಪಸ್ಸು ಬಂದು ಮಾಲುಪಟ್ಟಿಯನ್ನು ಸೇರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನಾಂಕದಂದು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65ಬಿ ಅನ್ವಯ ಪೊಲೀಸ್ ಕಾನ್ಸ್‌ಟೆಬರ್ ನಿರುಪಾದಿಯವರಿಂದ ದೃಢಪತ್ರವನ್ನು ನಿಪಿ.19ರಂತೆ ಸ್ವೀಕರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ.19ಎ ಎಂದು ಗುರುತಿಸಲಾಯಿತು.

3. ದಿಃ06.09.2022ರಂದು ಆರೋಪಿತರ ಪತ್ತೆಗಾಗಿ ಚಾಸಾ-12 ಮತ್ತು ಹೆಚ್.220 ಶಿವಕುಮಾರರವರನ್ನು ನೇಮಿಸಿದೆನು. ಅದೇ ದಿವಸ ಆರೋಪಿತರನ್ನು ಅವರು ನನ್ನ ಮುಂದೆ ಬೆಳಗ್ಗೆ 11.00ಗಂಟೆ ಹಾಜರುಪಡಿಸಿ ವರದಿಯನ್ನು ನಿಪಿ.20ರಂತೆ ನೀಡಿರುತ್ತಾರೆ. ಅದನ್ನು ನಿಪಿ.20ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ವಿಚಾರಣೆ ಮಾಡಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡೆನು, ನಂತರ ಆರೋಪಿಯನ್ನು ವೈದ್ಯಾಕೀಯ ಪರೀಕ್ಷೆಗೆ ಒಳಪಡಿಸಿ ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿಯವರು ನ್ಯಾಯಾಲಯದ ಮುಂದೆ ಇದ್ದಾರೆ.

4. ದಿಃ 06.09.2022ರಂದು ಚಾಸಾ-11ರವರಿಗೆ ರಹದಾರಿಯನ್ನು ನೀಡಿ ವಶಪಡಿಸಿಕೊಂಡು ಮಾಲನ್ನು ಮೈಸೂರಿನ ಆರ್.ಎಫ್.ಎಸ್.ಎಲ್.ಗೆ ಕಳುಹಿಸಿಕೊಂಡೆನು. ಮುಂದಿನ ತನಿಖೆ ಬಗ್ಗೆ ಕಡತವನ್ನು ಚಾಸಾ-15ರವರಿಗೆ ವಹಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

5. ದಿಃ 29ನೇ ತಾರೀಖಿನಂದು ನಾನು ಸ್ಥಳಕ್ಕೆ ಹೋಗಿರುತ್ತೇನೆ, ಅಲ್ಲಿ ಮಂದಾಕಿನಿಯವರು ಇದ್ದರು. ವಿರಾಂಜನೇಯರವರನ್ನು ನೋಟೀಸು ಕೊಟ್ಟು ಕರೆಸಿಲ್ಲ ವೈರ್ ಲೆಸ್ ಮೂಲಕ ಕರೆಸಿದ್ದೆನು. ಸದರಿ ಮಹಜರಿಗೆ ಮಂದಾಕಿನಿ ಮತ್ತು ವಿರಾಂಜನೇಯರವರ ಸಹಿಯನ್ನು ಪಡೆದುಕೊಂಡಿಲ್ಲ. ಅವರು ಇಬ್ಬರು ಹಾಜರು ಇದ್ದರು ಎನ್ನುವ ಬಗ್ಗೆ ಪೋಟೋವನ್ನು ತೆಗೆದುಕೊಂಡಿಲ್ಲ. ನಿಪಿ.2ರಲ್ಲಿ ಮೊದಲ ಪ್ಯಾರದಲ್ಲಿ ನಾನು ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿಸಿರುವ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರು ಕ್ರಮ ಎಂದು ಬರೆದಿದೆ ಎಂದರೆ ಸರಿ. ಆ ಸಮಯದಲ್ಲಿ ಲ್ಯಾಪ್ ಟಾಪಿನಲ್ಲಿ ಮಹಜರನ್ನು ಟೈಪ್

ಮಾಡಿತ್ತಾ ಎಂದರೆ ಸಾಕ್ಷಿಯು ಲ್ಯಾಪ್ ಟಾಪ್ ತೆಗೆದುಕೊಂಡು ಹೋಗಿದ್ದೆನು ಎನ್ನುತ್ತಾರೆ. ಸ್ಥಳದಲ್ಲಿ ಬಳಸಿದ ಮಾದರಿ ಸೀಲನ್ನು ನ್ಯಾಯಾಲಯಕ್ಕೆ ನೀಡಿಲ್ಲ. ಸ್ಥಳಕ್ಕೆ ಹೋಗಿಲ್ಲ ನಿಪಿ.2ನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ.17 ರಿಂದ 19ನ್ನು ಕೇಸಿಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 06.09.22ರಂದು ಮನೆಯಲ್ಲಿ ಇದ್ದ ಆರೋಪಿಯನ್ನು ಕರೆದುಕೊಂಡು ಬಂದಿದ್ದು ಎಂದರೆ ಸರಿಯಲ್ಲ. ಹಾಗೆ ಆರೋಪಿ ಯಾವುದೇ ಸ್ವಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**